

ಕ್ಯಾಮೆರಾ ಕಣ್ಣಲ್ಲಿ
ಹದ್ದಿನ ಶಿಕಾರಿ

ಪ್ರಾಡಕ್ಟ್ ಫೋಟೊಗ್ರಫಿಗಳ ಪರ್ಯಾಯ ಮಾರ್ಗವನ್ನೂ ಕಂಡುಕೊಂಡಿದ್ದಾರೆ. ಮಾಡೆಲ್‌ಗಳ ಪೋರ್ಟ್‌ಫೋಲಿಯೊ ಶೂಟ್ ಮಾಡುವುದರಿಂದ, ಅವರಿಗೂ ನನಗೂ ಇಬ್ಬರಿಗೂ ಲಾಭವಾಗುತ್ತದೆ ಎನ್ನುತ್ತಾರೆ. ಮುಖ್ಯವಾಗಿ, ರೂಪದರ್ಶಿಗಳಿಗೆ ಹೆಣ್ಣುಮಕ್ಕಳೇ ಫೋಟೊಶೂಟ್ ಮಾಡುತ್ತಾರೆಂದರೆ ಅವರಿಗೂ ಅದು ಆರಾಮದಾಯಕ ಎನ್ನುತ್ತಾರೆ. ತಮ್ಮ ಚಿತ್ರಗಳಿಗಾಗಿ ಫೋಟೊಗ್ರಫಿ ಆಫ್ ಅಮೆರಿಕದ ಅಡಿ ಬರುವ 'ಫ್ಲಾಪಾ ನ್ಯಾಷನಲ್ ಸಲೊನ್'ನಿಂದ ಕಂಚಿನ ಪದಕ, ವೈಪಿಎಸ್ ರಾಷ್ಟ್ರೀಯ ಮಟ್ಟದ 'ಆನರ್ ರಿಬ್ಬನ್', ನ್ಯಾಷನಲ್ ಜಿಯಾಗ್ರಫಿ ಸೇರಿದಂತೆ ಇತರ ನಿಯತಕಾಲಿಕೆಗಳಲ್ಲಿ ಫೋಟೊ ಪ್ರಕಟಣೆ ಹಾಗೂ ಇತ್ತೀಚೆಗಷ್ಟೆ ವೈಪಿಎಸ್‌ನಿಂದ ಆಸ್ಕರಿ ಪ್ರಶಸ್ತಿಗೆ ಕ್ಷಮಾ ಪಾತ್ರರಾಗಿದ್ದಾರೆ. ಫೆಡರೇಷನ್ ಆಫ್ ಇಂಡಿಯನ್ ಫೋಟೊಗ್ರಫಿ ಸೊಸೈಟಿಯ ಮಾನದಂಡಗಳನ್ನು ಪೂರೈಸಿ, ಹಲವು ಡಿಸ್ಟಿಂಕ್ಷನ್‌ಗಳನ್ನು ಸಾಧಿಸಬೇಕೆಂಬ ಹಂಬಲವೂ ಅವರಿಗಿದೆ.

'ಪ್ರಾಣಿಗಳು ಒಂದೆಡೆ ನೆಲೆಸಿರುತ್ತವೆ. ಅವುಗಳ ಚಿತ್ರಗಳನ್ನು ಸಫಾರಿಯಲ್ಲೂ ಸೆರೆಹಿಡಿಯಬಹುದು. ಆದರೆ, ಹಕ್ಕಿಗಳ ಚಿತ್ರ ತೆಗೆಯುವ ಸವಾಲೇ ಬೇರೆ. ಅವು ಕೆಲವೊಮ್ಮೆ ಕಣ್ಣಿಗೆ ಕಾಣಿಸುವುದಿಲ್ಲ. ಧ್ವನಿಯ ಜಾಡು ಹಿಡಿದೇ ಅವುಗಳನ್ನು ಹುಡುಕಬೇಕು. ಕಾಡುಮೇಡು, ಬೆಟ್ಟ–ಗುಡ್ಡ ಹೀಗೆ ಅನೇಕ ಕಡೆಗಳಲ್ಲಿ ಅಲೆಯಬೇಕು. ಅಲೆಮಾರಿಗಳ ಹಕ್ಕಿಗಳ ಚಿತ್ರಗಳನ್ನು ಸೆರೆಹಿಡಿಯಲು ನಾವೂ ಅಲೆಮಾರಿಗಳಾಗಬೇಕು. ಹಾಗಾಗಿ, ಈ ಕ್ಷೇತ್ರ ಹೆಣ್ಣುಮಕ್ಕಳಿಗೆ ಸವಾಲು. ಆದರೆ, ಸಾಧಿಸಲು ಅಸಾಧ್ಯವಾದದ್ದೇನಲ್ಲ. ಹಾಗಾಗಿ, ಛಾಯಾಗ್ರಹಣದಲ್ಲಿ ಹವ್ಯಾಸವಿರುವ ಹೆಣ್ಣುಮಕ್ಕಳಿಗಾಗಿಯೇ ಒಂದು ಗುಂಪು ಮಾಡಿಕೊಂಡು ಹೊರಗೆ ಹೋಗುವ ಯೋಜನೆ ರೂಪಿಸುತ್ತಿದ್ದೇನೆ. ಗುಂಪಾಗಿ ಹೋದಾಗ ಮನೆಯವರಿಗೂ ಆತಂಕ ತಪ್ಪುತ್ತದೆ' ಎನ್ನುತ್ತಾರೆ ಕ್ಷಮಾ.

## ಸುತ್ತಮುತ್ತ ಕಣ್ತೆರೆದು ನೋಡಿ....

ಬೆಂಗಳೂರಿನಂಥ ಕಾಂಕ್ರೀಟ್ ಕಾಡಿನಲ್ಲೇ, ನಾನು ಮನೆಯಿಂದಲೇ 30 ಪ್ರಭೇದಗಳ ಪಕ್ಷಿಗಳನ್ನು ನೋಡಿದ್ದೇನೆ. ಪ್ರಕೃತಿಯನ್ನು ಸುಮ್ಮನೆ ವೀಕ್ಷಿಸಿ. ನಿಮ್ಮ ಕಣ್ಣು ಮತ್ತು ಕಿವಿ ತೆರೆದಿಟ್ಟರೆ ಮನೆಯಂಗಳದಲ್ಲೇ ಪಕ್ಷಿಪ್ರಪಂಚ ಕಣ್ತುಂಬಿಕೊಳ್ಳಬಹುದು. ಪಕ್ಷಿಗಳಿಗೆ ಬರೀ ನೀರು ಧಾನ್ಯ ಇಡಬೇಡಿ. ಅವುಗಳಿಗೆ ನಂಬಿಕೆ ಬರಲು ಸುತ್ತಲೂ ನಾಲ್ಕೈದು ಗಿಡಗಳ ಕುಂಡಗಳನ್ನೂ ಇಡಿ. ಮುಖ್ಯವಾಗಿ ಅವುಗಳ ಜೀವಕ್ಕೆ ಅಪಾಯವಾಗುವಂಥ ಯಾವುದೇ ಕೆಲಸ ಮಾಡಬೇಡಿ ಎನ್ನುತ್ತಾರೆ ಅವರು.

ಹಕ್ಕಿಗಳ ಛಾಯಾಚಿತ್ರಗಳಿಗಾಗಿ ಬಹುತೇಕ ರಾಜ್ಯಗಳನ್ನು ಸುತ್ತಿರುವ ಕ್ಷಮಾ, ಈ ಕ್ಷೇತ್ರದಲ್ಲಿ ಮತ್ತಷ್ಟು ಕಲಿಯುವುದಿದೆ ಎಂದು ವಿನಮ್ರವಾಗಿ ನುಡಿಯುತ್ತಾರೆ. ಹುಲಿ ನೀರು ಕುಡಿಯುವಾಗ ಎದುರಿಗಿರುವವರನ್ನು ದಿಟ್ಟಿಸಿ ನೋಡುವ ಹಾಗೂ ಕಪ್ಪುಚಿರತೆಯ ಚಿತ್ರಗಳನ್ನು ತೆಗೆಯಬೇಕೆಂಬ ಆಸೆ ಇದೆ. ವಿದೇಶಗಳಲ್ಲಿ ಪಕ್ಷಿ ಛಾಯಾಗ್ರಹಣಕ್ಕೆ ಹೆಚ್ಚು ಅವಕಾಶ ಎನ್ನುತ್ತಾರೆ ಕೆಲವರು. ಆದರೆ, ನನಗೆ ನಮ್ಮಲ್ಲೇ ಇರುವ ಅವಕಾಶಗಳನ್ನು ಬಳಸಿಕೊಳ್ಳಬೇಕೆಂಬ ಆಸೆ ಇದೆ. ದೊಡ್ಡ ಲೆನ್ಸ್, ದುಬಾರಿ ಕ್ಯಾಮೆರಾ ಇದ್ದಾಕ್ಷಣ ಫೋಟೊಗ್ರಫರ್ ಆಗಲು ಸಾಧ್ಯವಿಲ್ಲ. ಅದರ ಕುರಿತ ಜ್ಞಾನ, ತೆಗೆಯಬೇಕಿರುವ ಚಿತ್ರಗಳ ಪ್ರಾಥಮಿಕ ಜ್ಞಾನ ಅಗತ್ಯ. ಅಂತೆಯೇ ಮತ್ತೊಬ್ಬರು ತೆಗೆದ ಚಿತ್ರಗಳನ್ನು ನಕಲು ಮಾಡದೇ ಸ್ವಂತಿಕೆ ರೂಢಿಸಿಕೊಂಡರೆ ಮಾತ್ರ ನಿಮ್ಮ ಛಾಪು ಮೂಡಿಸಬಲ್ಲಿರಿ ಎನ್ನುತ್ತಾರೆ ಅವರು.

ಪ್ರತಿಕ್ರಿಯಿಸಿ: feedback@sudha.co.in

